ರಾಜ್ಯದಲ್ಲಿರುವ ಸ್ಕೂಲು ಮತ್ತು ಕಾಲೇಜುಗಳ ಸಂಖ್ಯೆ ಬಗ್ಗೆ.

1919. ಶ್ರೀ ಎಸ್. ಷಫಿ ಅಹಮದ್ (ತುಮಕೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸ್ಕೂಲ್‌ಗಳು. ತಾಂತ್ರಿಕ ಶಿಕ್ಷಣ ಸಂಸ್ಥೆ ಮತ್ತು ವಿಜ್ಞಾನ ಮತ್ತು ಕಲಾ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಮತ್ತು ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಸಂಖ್ಯೆ ಎಷ್ಟು :

ಇ) ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಕಾಲೇಜುಗಳು ಮತ್ತು ಸ್ಕೂಲ್‌ಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

ಈ) ಆರ್ಥಿಕ ದಿಗ್ಬಂದನ ಸಡಿಲಿಸಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ರಾಜ್ಯದಲ್ಲಿ 34 ಚಿತ್ರಕಲಾ ಕಾಲೇಜುಗಳು. 258 ಕಲಾ ಕಾಲೇಜುಗಳು. ಮತ್ತು 76 ವಿಜ್ಞಾನ ಪದವಿ ಪೂರ್ವ ಕಾಲೇಜುಗಳು ಇರುತ್ತವೆ.

ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ 51 ಇಂಜಿನಿಯರಿಂಗ್ ಕಾಲೇಜುಗಳು ಮತ್ತು 6 ಕಿರಿಯ ತಾಂತ್ರಿಕ ಶಿಕ್ಷಣ ಶಾಲೆಗಳು ಇರುತ್ತವೆ. ರಾಜ್ಯದಲ್ಲಿನ 118 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 18 ಕಲಾ. 7 ವಿಜ್ಞಾನ. 3 ಕಲಾ ಮತ್ತು ವಿಜ್ಞಾನ 70 ಕಲಾ ಮತ್ತು ವಾಣಿಜ್ಯ. 2 ವಾಣಿಜ್ಯ. 18 ಕಲಾ. ವಾಣಿಜ್ಯ ವಿಜ್ಞಾನ ಸಂಯೋಜಿತ ಶಿಕ್ಷಣ ಸಂಸ್ಥೆಗಳಾಗಿರುತ್ತವೆ.

ಆ) ರಾಜ್ಯದಲ್ಲಿ 135 ಪಾಲಿಟೆಕ್ನಿಕ್ ಮತ್ತು ವೃತ್ತಿಪರ ಶಿಕ್ಷಣ ಕೋರ್ಸ್‌ಗಳಲ್ಲಿ. 462. ಪದವಿಪೂರ್ವ ಕಾಲೇಜುಗಳಲ್ಲಿ. ಹಾಗೂ 42 ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳಲ್ಲೂ ಇರುತ್ತವೆ.

ಇ) ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಒಟ್ಟು 774 ಹುದ್ದೆಗಳು ಖಾಲಿ ಇರುತ್ತವೆ. ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜುಗಳಲ್ಲಿ 21 ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳಲ್ಲಿ 789 ಹುದ್ದೆಗಳು ಖಾಲಿ ಇರುತ್ತವೆ.

ಈ) ಸರ್ಕಾರದ ಪತ್ರ ಸಂಖ್ಯೆ ಇಡಿ 116 ಡಿಟಿಇ 90 ದಿನಾಂಕ 30-1-91ರಲ್ಲಿ ಮಿತವ್ಯಯ ಆದೇಶವನ್ನು ಸಡಿಲಿಸಿ 145 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಸಿದ್ದು. ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಈ ದಿಶೆಯಲ್ಲಿ ಸಂದರ್ಶನಕ್ಕೆ ಕರೆದಿದ್ದಾರೆ. ಬಾಕಿ ಉಳಿದ ಖಾಲಿ ಹುದ್ದೆಗಳನ್ನು ತುಂಬುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.